# ಎನ್‌ಐಟಿಕೆ ಸ್ಮಾರ್ಟ್ ಇಂಡಿಯಾ ಹ್ಯಾಕಥಾನ್

# 200ಕ್ಕೂ ಅಧಿಕ ವಿದ್ಯಾರ್ಥಿಗಳು ಭಾಗಿ

**ಸುರತ್ಕಲ್:** ಎನ್‌ಐಟಿಕೆ ಕ್ಯಾಂಪಸ್‌ನಲ್ಲಿ ಬುಧವಾರ ಸ್ಮಾರ್ಟ್ ಇಂಡಿಯಾ ಹ್ಯಾಕಥಾನ್ 2024 ಆರಂಭವಾಗಿದ್ದು, ಇಲ್ಲಿನ ಕೇಂದ್ರವೊಂದರಲ್ಲಿಯೇ 320ಕ್ಕೂ ಅಧಿಕ ಪ್ರತಿಭಾವಂತ ವಿದ್ಯಾರ್ಥಿಗಳು ಭಾಗಿಯಾದರು.

ವಿಶ್ವದ 51 ಸೆಂಟರ್‌ಗಳಲ್ಲಿ ಎನ್‌ಐಟಿಕೆ ಒಂದಾಗಿದ್ದು, ಕರ್ನಾಟಕ, ಆಂಧ್ರ, ಭೋಪಾಲ್ ಸಹಿತ ವಿವಿಧೆಡೆಯಿಂದ ವಿದ್ಯಾರ್ಥಿಗಳು ಆಗಮಿಸಿದ್ದು 36 ಗಂಟೆಗಳ ಒಳಗಾಗಿ ಕರ್ತವ್ಯ ಮುಗಿಸುವಲ್ಲಿ ನಿರತರಾಗಿದ್ದರು.

ಪ್ರಧಾನಿ ನರೇಂದ್ರ ಮೋದಿ ಯುವ ಪ್ರತಿಭೆಗಳೊಂದಿಗೆ ಸಂವಾದವನ್ನೂ



ನಡೆಸಲಿದ್ದಾರೆ. ಭಾರತ ಸರಕಾರದ ವಿವಿಧ ಸಚಿವಾಲಯಗಳು ಈ ಕಾರ್ಯಕ್ರಮದಲ್ಲಿ ಕೈ ಜೋಡಿಸಿವೆ.

ಈ ಕಾರ್ಯಕ್ರಮದಲ್ಲಿ ಉಸ್ತುವಾರಿ ಹೊತ್ತಿರುವ ವೆಂಕಟೇಶ್ ಪೆರುಮಾಳ್ ಮಾತನಾಡಿ, 33 ತಂಡ ಆಗಮಿಸಿದ್ದು, ವಿದ್ಯಾರ್ಥಿನಿಯರ ತಂಡವೂ ಭಾಗಿಯಾಗಿದೆ. ಎನ್‌ಐಟಿಕೆಯಲ್ಲಿ ಒಟ್ಟು 6 ಸಮಸ್ಯೆಗಳನ್ನು ಗುರುತಿಸಿ ನೀಡಲಾಗಿದೆ. ಈ ಹ್ಯಾಕಾಥಾನ್ ಫೈನಲ್ ಆಗಿದ್ದು, ವಿಜೇತರನ್ನು ಆಯ್ಕೆ ಮಾಡಲಾಗುತ್ತದೆ. ಕೇಂದ್ರದ ಕಲ್ಲಿದ್ದಲು, ಯುವ ಮತ್ತು ಕ್ರೀಡಾ ಇಲಾಖೆಯಿಂದ ತಲಾ ಮೂರು ಸಮಸ್ಯೆ ನೀಡಲಾಗಿದೆ. ಇದು 7ನೇ ಎಡಿಷನ್ ಆಗಿದ್ದು ಒಟ್ಟು 1.2 ಮಿಲಿಯನ್ ಮಕ್ಕಳು ನೋಂದಣಿ ಮಾಡಿಕೊಂಡಿದ್ದರು. ಇದರ ಮುಖ್ಯ ಉದ್ದೇಶ ದೇಶದಲ್ಲಿನ ತಾಂತ್ರಿಕ ಸಮಸ್ಯೆ ಒಳಗೇ ಪರಿಹಾರ ಹಾಗೂ ವಿದ್ಯಾರ್ಥಿಗಳಿಗೆ ಅವಕಾಶ, ಅನ್ವೇಷಣೆಗೆ ಪ್ರೋತ್ಸಾಹ ನೀಡುವುದಾಗಿದೆ ಎಂದರು.

Hosa Diganta. Dat:12/12/24, p, no - 03